**C.C.No.1075/2018**
**C.W-8**
**P.W-6**

# <u>ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ ಕುಣಿಗಲ್</u>

## ಸಿ.ಸಿ.1075/2018

| | | |
|---|---|---|
| ಸಾಕ್ಷಿದಾರರ ಹೆಸರು | : | ಆದಿನಾರಾಯಣ |
| ತಂದೆಯ ಹೆಸರು | : | ಶೇಷಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಟಿ.ಸಿ.,ಕೆ ಎಸ್ ಆರ್ ಟಿ ಸಿ |
| ವಾಸ | : | ಕುಣಿಗಲ್ ಟೌನ್. |

**ಸಾಕ್ಷಿಯನ್ನು ದಿನಾಂಕ:20.01.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನಾನು ಹನ್ನೆರಡು ವರ್ಷಗಳಿಂದ ಕುಣಿಗಲ್ ನಲ್ಲಿ ಟಿಸಿಯಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಇಲಾಖೆ ಬಸ್ ಸಂ.ಕೆಎ-06-ಎಫ್-922 ಗೆ ಬೋರಲಿಂಗಯ್ಯನಪಾಳದ ಬಳಿ ಅಪಘಾತವಾಗಿದೆ ಎಂದು ನಮ್ಮ ಮೇಲಾಧಿಕಾರಿಗಳು ಮಾಹಿತಿ ನೀಡಿದ ಮೇರೆಗೆ ದಿನಾಂಕ 17.07.2018 ರಂದು ಪೊಲೀಸ್ ಠಾಣೆಗೆ ಹೋಗಿ ಆತೋರೈಸೇಷನ್ ಲೆಟರ್ ನ ಆಧಾರದ ಮೇಲೆ ನಮ್ಮ ಇಲಾಖಾ ಬಸ್ಸನ್ನು ನಷ್ಟಭರ್ತಿ ಪತ್ರ ಬರೆದುಕೊಟ್ಟು ಬಸ್ಸನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ನಷ್ಟಭರ್ತಿ ಪತ್ರದಲ್ಲಿ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸಹಿ ಮಾಡಿದ ನಷ್ಟಭರ್ತಿ ಅನ್ನು ನಿಪಿ.4 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಹಿಯನ್ನು **ನಿಪಿ.4(ಎ)** ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃಆರೋಪಿ ಪರ ಶ್ರೀ ವೈ ಆರ್ ಹೆಚ್ ವಕೀಲರಿಂದಃ**

**C.C.No.1075/2018**
**C.W-8**
**P.W-6**

ನಮ್ಮ ಇಲಾಖಾ ಬಸ್ ಗೆ ಯಾವ ದಿನ ಅಪಘಾತವಾಗಿತ್ತು ಎಂದು ನನಗೆ ಗೊತ್ತಿಲ್ಲ. ನಮ್ಮ ಇಲಾಖಾ ವತಿಯಿಂದ ಅಪಘಾತವಾಗಿತ್ತೇ ಇಲ್ಲವೇ ಎಂದು ಪರಿಶೀಲನೆ ಮಾಡಿಲ್ಲ. ನಮ್ಮ ಇಲಾಖಾ ಬಸ್ ಗೆ ಯಾವುದೇ ಜಖಂ ಆಗಿರಲಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ಖುದ್ದಾಗಿ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ. ನಿಪಿ.4ರ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ವಾಹನಕ್ಕೆ ಅಪಘಾತವಾದ ಬಗ್ಗೆ ಮತ್ತು ಅದನ್ನು ಬಿಡಿಸಿಕೊಂಡ ಬಗ್ಗೆ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಇಲಾಖಾ ಬಸ್ ಗೆ ಯಾವುದೇ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಆತೋರೈಸೇಷನ್ ಲೆಟರ್ ನೀಡದರೆ ಇದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್